ಅ) ನಿಪ್ಪಾಣಿ ನಗರಕ್ಕೆ ಅಭಿವೃದ್ಧಿನೀರು ಸರಬರಾಜು ಯೋಜನೆಯನ್ನು ವೇದಗಂಗಾ ನದಿ ಮೂಲದಿಂದ ಮಾಡಲು ಉದ್ದೇಶಿಸಿಲಾಗಿದ್ದು, ಈ ಯೋಜನೆಯ ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ. ಇದನ್ನು ಡಿಸೆಂಬರ್ ೧೯೯೫ರ ಅಂತ್ಯದ ವೇಳೆಗೆ ಚಾಲ್ತಿ ಮಾಡಲು ಉದ್ದೇಶಿಸಲಾಗಿದೆ.

ಯಲಹಂಕ ಪುರಸಭೆ ಕುರಿತು

೧೨೪ - ಶ್ರೀ ಶಿವರಾಜ್ (ಯಲಹಂಕ) : ಮಾನ್ಯ ನಗರಾಭಿವೃದ್ಧಿ, ಕಾಡಾ ಹಾಗೂ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ಪುರಸಭೆಯ ಅವಧಿ ಮುಗಿದಿದ್ದರೂ ಸಹ ಇನ್ನೂ ಕಾರ್ಯಚರಣೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದರ ಬಗ್ಗೆ ಸಂಬಂಧಪ್ಪಟವರ ವಿರುದ್ಧ ಸರ್ಕಾರದವವು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಹಾಗೂ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು)

ಅ) ಹೌದು.

ಆ) ಬೆಂಗಳೂರು(ನಗರ) ಜಿಲ್ಲಾಧಿಕಾರಿಗಳವರನ್ನು ಆಡಳಿತಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿದೆ. ರಿಟ್ ಅರ್ಜಿ ಸಂಖ್ಯೆ: ೧೬೦೧೦:೯೫ ರಲ್ಲಿ ಅಧ್ಯಕ್ಷರು ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆಯನ್ನು ಪಡೆದಿರುತ್ತಾರೆ. ಈ ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮಕೈಗೊಳ್ಳಲಾಗಿದೆ. ಈ ಸಂಬಂಧದಲ್ಲಿ ತಡೆಯಾಜ್ಞೆಯಿಂದಾಗಿ ಯಾರ ವಿರುದ್ಧವು ಕ್ರಮವನ್ನು ಕೈಗೊಳ್ಳಲು ಬರುವುದಿಲ್ಲ.

ಆಳಂದ ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರ

125 - ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ಸಕ್ಕರೆ ಕಾರ್ಖಾನೆಯಲ್ಲಿ ಆಡಳಿತ ಮಂಡಳಿಯ ಕಾರ್ಯವೈಖರಿಯಿಂದ ಅವ್ಯವಹಾರ ನಡೆದಿದ್ದು ನಿಜವೇ

ಆ) ನಿಜವಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಇ) ಕಾರ್ಖಾನೆಯು ಈ ವರ್ಷ ಎಷ್ಟು ಕಬ್ಬು ಅರೆದಿದೆ

ಈ) ಈ ಕಾರ್ಖಾನೆ ಮುಂದಿನ ವರ್ಷ ಕೆಲಸ ಆರಂಭಿಸುವುದೇ ಅಥವಾ ಇಲ್ಲವೇ

ಶ್ರೀ ಪಿ.ಸಿ ಸಿದ್ದನಗೌಡರು(ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ನಿಜ.

ಆ) ಆಡಳಿತ ಮಂಡಳಿಯನ್ನು ರದ್ದುಪಡಿಸಿ ಜಿಲ್ಲಾಧಿಕಾರಿಯವರನ್ನು ವಿಶೇಷಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ಕಲಂ ೬೪ರ ಪ್ರಕಾರ ವಿಚಾರಣೆಗೆ ಆದೇಶ ಮಾಡಲಾಗಿತ್ತು. ವಿಚಾರಣಾಧಿಕಾರಿಯವರು ವರದಿಯನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ ೬೪ರ ರೀತ್ಯಾ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶ ಹೊರಡಿಸಿ, ವಿಚಾರಣಾ ವರದಿಯಲ್ಲಿರುವ ನ್ಯೂನತೆಗಳಿಗೆ ಸಂಬಂಧಿಸಿದಂತೆ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕಾರ್ಖಾನೆಗೆ ಆದೇಶ ನೀಡಿರುತ್ತಾರೆ.

ಇ) ೧೯೯೪-೯೫ರ ಸಾಲಿನಲ್ಲಿ ೨,೧೫,೦೩೮, ಮೆ.ಟನ್ ಕಬ್ಬನ್ನು ನುರಿಸಿರುತ್ತದೆ.

ಈ) ಆರಂಭಿಸುವುದು.

ಕಾರವಾರ ಒಳಚರಂಡಿ ಯೋಜನೆಯ ಅಂದಾಜು ವೆಚ್ಚ

127 - ಶ್ರೀ ವಸಂತ ಅನ್ನೋಟಿಕಾರ (ಕಾರವಾರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ಒಳಚರಂಡಿ ಯೋಜನೆಯನ್ನು ಸರ್ಕಾರದವರು ತಯಾರಿಸಿದ್ದಾರೆಯೇ

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು

ಇ) ಈ ಯೋಜನೆಗೆ ತಾಂತ್ರಿಕ ಮಂಜೂರಾತಿ ನೀಡಿದೆಯೇ?

ಈ) ನೀಡಿದ್ದಲ್ಲಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ತಯಾರಿಸಲಾಗಿದೆ.

ಆ) ೩೬೧೩.೦೦ ರೂಪಾಯಿಗಳು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಭೀಮಾ ಬ್ಯಾರೇಜ್ ಕಮ್ ಬ್ರಿಡ್ಜ್ ಕಾರ್ಯಸ್ಥಗಿತ

೧೩೦ - ಶ್ರೀ ಮಾಲೀಕಯ್ಯ ವಿ. ಗುತ್ತೇದಾರ (ಅಫಜಲ್‌ಪುರ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?